CC 98/2019

ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ 23-09-2024

<u>ಮುಂದುವರಿದ ಪಾಟೀ ಸವಾಲು</u> ಃ ಆರೋಪಿ ಪರಃ ಶ್ರೀ ಎನ್ ಎಮ್ ಜೆ ವಕೀಲರಿಂದಃ

ಈಗ ನಾನು ಕಲ್ಲಿನ ಗಣಿಗಾರಿಕೆ ಮಾಡುತ್ತಿಲ್ಲ. 2019-2020 ನೇ ಇಸವಿಯಲ್ಲಿ ನಿಲ್ಲಿಸಿರುತ್ತೇನೆ. ಆರೋಪಿಯ ತಮ್ಮ ಕೂಡ ಕಿವುಡ ಮತ್ತು ಮೂಗ. ಆರೋಪಿಯ ತಮ್ಮ ನನ್ನ ಬಳಿ ಕೆಲಸ ಮಾಡಿಲ್ಲ. ಕಲ್ಲಿನ ಗಣಿಗಾರಿಕೆಯ ಕೆಲಸಗಾರರಿಗೆ

ದಿನಕೂಲಿ ಕೊಡುತ್ತೇವೆ. ಆ ಬಗ್ಗೆ ಸಹಿ ಪಡೆದುಕೊಳ್ಳುವುದಿಲ್ಲ. 2002 ನವೆಂಬರ್ ನಿಂದ 16-12-2015 ರವರೆಗೆ ನಿರಂತರವಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗಣಿ ಅಧಿಕಾರಿಗಳು ಮಾರಾಟಕ್ಕೆ ಇಟ್ಟ ಕಲ್ಲುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ನಿಪಿ-1 ರಲ್ಲಿರುವ ಬರವಣಿಗೆ ಮತ್ತು ಸಹಿ ಬೇರೆ ಬೇರೆ ಎಂದರೆ ಸರಿ. ನಿಪಿ-1 ರಲ್ಲಿರುವ ಸಹಿ ಮತ್ತು ನಿಪಿ-5 ರಲ್ಲಿರುವ ಸಹಿ ಬೇರೆ ಬೇರೆ ಎಂದರೆ ಸರಿ. ನಿಪಿ-1 ಮತ್ತು ಆರೋಪಿ ವಕಾಲತ್ ರಲ್ಲಿರುವ ಸಹಿ ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ-1 ಮತ್ತು ಆರೋಪಿಯ ಅಪಾದನೆ ಸಾರಂಶ ರಲ್ಲಿರುವ ಸಹಿ ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕಿನಲ್ಲಿರುವ ಬರವಣಿಗೆ ಮತ್ತು ಸಹಿಗಳು ಆರೋಪಿಯದ್ದು ಎಂದು ತಿಳಿಯಲು ಕೈಬರಹ ತಜ್ಞರಿಗೆ ಕಳುಹಿಸಲು ಯಾವುದೇ ತಕರಾರು ಇಲ್ಲ ಎಂದರೆ ನನಗೆ ಹೇಳಲು ಬರುವುದಿಲ್ಲ. ಆರೋಪಿಗೆ ಸಹಿಯನ್ನು ಹೊರತುಪಡಿಸಿ ಬೇರೆ ಯಾವುದೇ ಬರವಣಿಗೆ ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರಿ ಜಮೀನಿನಲ್ಲಿ ಅನಾಧಿಕೃತವಾಗಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾಗ ಅಧಿಕಾರಿಗಳು ದಾಳಿ ಮಾಡಿದ್ದು ಆ ಸಮಯದಲ್ಲಿಯೂ ಆರೋಪಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯನ್ನು ಸರ್ಕಾರಿ ಅಧಿಕಾರಿಗಳು ಅಕ್ರಮ ಗಣಿಗಾರಿಕೆ ಜಾಗದಲ್ಲಿ ಕೆಲಸ ಮಾಡುತ್ತಿದ್ದ ಕಾರಣಕ್ಕಾಗಿ ಹಲವಾರು ಬಾರಿ ಬಂಧಿಸಿದ್ದರು ಎಂದರೆ ಸರಿಯಲ್ಲ. ನಾವು ನಡೆಸುತ್ತಿದ್ದ ಗಣಿಗಾರಿಕೆಗೆ ಪರವಾನಿಗೆ ಇಲ್ಲದಿದ್ದರಿಂದ ಆರೋಪಿ ಕೆಲಸಕ್ಕೆ ಬರುವುದು ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಕೆಲಸಕ್ಕೆ ಮತ್ತೆ ವಾಪಾಸ್ಸು ಬರುವಂತೆ ಹೆದರಿಸಲು ನಿಪಿ-1 ಚೆಕ್ಕು ಬರವಣಿಗೆಯನ್ನು ನಾನೇ ಬರೆದು ಆರೋಪಿಯ ಸಹಿಯನ್ನು forgery ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ಬರವಣಿಗೆಗೂ, ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಕೆಲಸಕ್ಕೆ ಬರುತ್ತಿದ್ದಾಗ ಆತನ ಸಹಿ ಪರಿಚಯ ಇತ್ತು ಎಂದರೆ ಸರಿಯಲ್ಲ.

ಆರೋಪಿಯ ನ್ಯೂನತೆಯನ್ನು ನಾನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ವಿಚಾರಣೆಯಲ್ಲಿ ಸತ್ಯ ವಿಷಯವನ್ನು ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ. ನಿಗದಿತ ಅವಧಿಯಲ್ಲಿ ಚೆಕ್ಕನ್ನು ಬ್ಯಾಂಕಿಗೆ ನಗಧಿಕರಣಕ್ಕೆ ಹಾಕಿಲ್ಲ ಎಂದರೆ ಸರಿಯಲ್ಲ. ನೋಟಿಸನ್ನು ಸಹ ನಿಗದಿತ ಅವಧಿಯಲ್ಲಿ ಆರೋಪಿಗೆ ನೀಡಿಲ್ಲ ಹಾಗೂ ನಿಗದಿತ ಅವಧಿಯಲ್ಲಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಿವುಡ ಮತ್ತು ಮೂಗನಾಗಿದ್ದು, ವಿದ್ಯಾಭ್ಯಾಸ ಇಲ್ಲದ ಕಾರಣ ನೋಟಿಸಿಗೆ ಉತ್ತರ ನೀಡಲು ಅಸಾಧ್ಯವಾಗಿರುತ್ತದೆ ಎಂದರೆ ವಿದ್ಯಾಭ್ಯಾಸ ಇದೆ. ಆರೋಪಿ ನನ್ನಿಂದ ಯಾವುದೇ ಹಣ ಪಡೆದಿರುವುದಿಲ್ಲ ಹಾಗೂ ಆ ಕಾರಣಕ್ಕಾಗಿ ಯಾವುದೇ ಹಣ ಕೊಡಲು ಭಾಧ್ಯಸ್ತರಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಮೇಲಿರುವ ಸಹಿ ಮತ್ತು ಬರಹಗಳ ಶಾಹಿ, ಫ್ರಾಯ ಬೇರೆ ಬೇರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ